ಎಂ ಸಿ ನಂ.8/2025

ಪಿ.ಡಬ್ಲ್ಯೂ-2 ಬಾಬುರಾಯ್ ತಂದೆ ಬಸುಗೊಂಡಪ್ಪ ಖೇಡಗಿ

**(ಇಂದು ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನನ್ನ ಮುಖ್ಯ ವಿಚಾರಣೆಯಲ್ಲಿನ ವಿಷಯಗಳು ನನಗೆ ಗೊತ್ತು. ಚೆನ್ನಮ್ಮ ಮತ್ತು ಶಿವಶರಣರವರ ಮದುವೆ ೨೦೧೨ ರಲ್ಲಿ ಆಗಿರುತ್ತದೆ. ಅವರಿಗೆ ೨ ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು ಇರುತ್ತಾರೆ. ಅರ್ಜಿದಾರ ಶಿವಶರಣ ನನ್ನ ಮಗನಾಗಿರುತ್ತಾನೆ. ನನಗೆ ೩ ಜನ ಮಕ್ಕಳು ಇರುತ್ತಾರೆ. ನನಗೆ ಹೆಣ್ಣುಮಕ್ಕಳು ಇರುವುದಿಲ್ಲ. ನನ್ನ ಹೆಂಡತಿ ಈಗ ಇರುತ್ತಾರೆ. ನನ್ನ ಹೆಸರಿನಲ್ಲಿ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮೊದಲು ಇತ್ತು, ಈಗ ಮಾರಾಟ ಮಾಡಿರುತ್ತೇನೆ ಎನ್ನುತ್ತಾರೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಲಾಳಸಂಗಿ ಗ್ರಾಮದಲ್ಲಿ ನನಗೆ ಹಿರಿಯರಿಂದ ಬಂದ ಆಸ್ತಿ ಇತ್ತು ಎಂದರೆ ಸರಿ. ನಾನು ರವಿ ತಂದೆ ಗುರಪ್ಪ ಸದರ ಗೊಂಡರವರಿಗೆ ಸದರಿ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಅರ್ಜಿದಾರನಾದ ನನ್ನ ಮಗನ ಮದುವೆಯ ಮೊದಲೇ ಮಾರಾಟ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಜಮೀನು ಮಾರಾಟ ಮಾಡಿ ನಾನು ಗೋಳಸಾರ ಗ್ರಾಮದಲ್ಲಿ ೫ ಎಕರೆ ಜಮೀನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮೊಮ್ಮಕ್ಕಳಿಗೆ ಆಸ್ತಿ ಕೊಡಬೇಕಾಗುತ್ತದೆ ಎಂದು ಹೇಳಿ, ಒಂದು ಸುಳ್ಳು ದಾನ ಪತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ.

೨. ನನ್ನ ಮಗನ ಮದುವೆಯ ಸಮಯದಲ್ಲಿ ನನ್ನ ಸೊಸೆಯಾದ ಚೆನ್ನಮ್ಮ ೨ ತೊಲೆ ಬಂಗಾರ ಮತ್ತು ೩ ಲಕ್ಷ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ

ಗೋಳಸಾರ ಗ್ರಾಮದಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ಮದುವೆಯಾದ ಮೇಲೆ ನನ್ನ ಮಗ ಮತ್ತು ಸೊಸೆ ೨ ತಿಂಗಳು ನನ್ನ ಜೊತೆ ಇದ್ದರು. ನನ್ನ ಮಗ ಮತ್ತು ಸೊಸೆ ೨ ತಿಂಗಳಾದ ನಂತರ ಬೇರೆ ಮನೆ ಮಾಡಿ ವಾಸ ಇದ್ದರು. ನನ್ನ ಮಗ ಜೆ ಸಿ ಬಿ ಮತ್ತು ಟಿಪ್ಪರ ಚಾಲಕನಾಗಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ. ನನ್ನ ಮಗ ರೈತರ ಹತ್ತಿರ ಕೂಲಿ ಕೆಲಸಕ್ಕೆ ಹೋಗುತ್ತಾನೆ.

೩. ನನ್ನ ಮಗ ೨೦೨೧ ರಲ್ಲಿ ಒಂದು ಲೀಗಲ್ ನೋಟಿಸು ನನ್ನ ಸೊಸೆ ಚೆನ್ನಮ್ಮರವರಿಗೆ ಕಳುಹಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ನಾನು ಇಂಡಿ ನ್ಯಾಯಾಲಯದಲ್ಲಿ ಒಂದು ಕೇವಿಯಟ್ ಅರ್ಜಿ ಹಾಕಿದ್ದೆ ಎಂದರೆ ಸರಿಯಲ್ಲ. ನನ್ನ ಮಗ ಇಂಡಿ ನ್ಯಾಯಾಲಯದಲ್ಲಿ ಎಂ ಸಿ ನಂಬರ ೧೨/೨೦೨೨ ಎಂಬ ಕೇಸು ಹಾಕಿದ್ದರು ಎಂದರೆ ಸರಿ. ಸಾಕ್ಷಿಯು ತನಗೆ ಮಕ್ಕಳು ಬೇಕು ಎಂದು ಕೇಸು ಹಾಕಿದ್ದ ಎನ್ನುತ್ತಾರೆ. ಆ ಸಮಯದಲ್ಲಿ ನನ್ನ ಮಕ್ಕಳು ಮತ್ತು ಸೊಸೆ ಗೋಳಸಾರ ಗ್ರಾಮದಲ್ಲಿ ಇದ್ದರು ಎಂದರೆ ಸರಿ. ನನ್ನ ಮಗ ಕುಡಿದು ಬಂದು ನನ್ನ ಸೊಸೆಗೆ ಹೊಡೆ-ಬಡೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗ ಹೊಡೆ-ಬಡೆ ಮಾಡಿದ್ದರಿಂದ ನನ್ನ ಸೊಸೆಯಾದ ಚೆನ್ನಮ್ಮ ತವರು ಮನೆಗೆ ಹೋಗಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಸೊಸೆ ತಾನೆ ಹೋಗಿರುತ್ತಾಳೆ, ಅವಳನ್ನು ಕರೆದರೂ ಕೂಡಾ ಬಂದಿರುವುದಿಲ್ಲ ಎನ್ನುತ್ತಾರೆ.

೪. ನನ್ನ ಸೊಸೆಯನ್ನು ಕರೆದುಕೊಂಡು ಹೋಗುವಂತೆ ಹಿರಿಯರು ಸಾಕಷ್ಟು ಹೇಳಿದರೂ ಕೂಡಾ ನಾವು ನನ್ನ ಸೊಸೆಯನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸೊಸೆ ನನ್ನ ಮಗನ ವಿರುದ್ದ ಜೀವನಾಂಶಕ್ಕಾಗಿ ಕೇಸು ಹಾಕಿರುತ್ತಾರೆ ಎಂದರೆ ಸರಿ. ನಾನು ನನ್ನ ಸೊಸೆ ಮತ್ತು ಮೊಮ್ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೆ ನನ್ನ ಮಗನ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.